ಬೇರುಗಳನ್ನು, ಹಾರಾಡುತ್ತಿರುವ, ಆಸ್ಫೋಟಗೊಳ್ಳುತ್ತಿರುವ ಬೀಜಗಳು ಎಲ್ಲೆಲ್ಲಿ ಬೀಳುತ್ತವೆಯೋ ಅಲ್ಲಿ ಗಿಡಗಳಾಗಿ ಮೊಳಕೆಯೊಡೆಯುತ್ತಿರುವ ಜೀವರಸಕ್ಕೆ ಕೊಡಲಿಗಳೇನು ಮಾಡಲು ಸಾಧ್ಯ?

ಆದರೂ ಪ್ರತಿಯೊಬ್ಬನೂ ಧೈರ್ಯದಿಂದ ಕುಡುಗೋಲು, ಕೊಡಲಿಗಳಿಂದ ಕೆಲಸ ಮಾಡ ತೊಡಗಿದರು. ಎಲೆಗಳ, ರೆಂಬೆಗಳ ದೊಡ್ಡ ಗುಡ್ಡೆಯನ್ನೇ ಹಾಕಿದರು. ಆದರೆ, ಅದರಿಂದೇನೂ ಉಪಯೋಗವಾಗಲಿಲ್ಲ. ಅರಣ್ಯದಿಂದುಂಟಾದ ಗೊಂದಲ ಪ್ರತಿಗಂಟೆಯೂ ಬೆಳೆಯಿತು. ಅಲ್ಲಿ ಒಟ್ಟಿಗೆ ಹೆಣೆದುಕೊಂಡ ಬಳ್ಳಿಗಳು ರಾಕ್ಷಸಾಕಾರದ ಚಿಗುರುಗಳನ್ನು ಕುಡಿಗಳನ್ನು ತಳುಕು ಹಾಕಿಕೊಂಡು ಅರಣ್ಯ ನಗರಿಯ ರಸ್ತೆಗಳ ಮೇಲೆ ಆಕ್ರಮಣ ನಡೆಸಿದವು. ಈ ಮೊದಲೆ ಕೀಟಗಳನ್ನು, ಸರಿಸೃಪಗಳನ್ನು ಕಾಣಬಹುದಾಗಿತ್ತು. ಮೂಲೆ ಮೂಲೆಯಲ್ಲಿ ಪಕ್ಷಿಗಳ ಗೂಡುಗಳು, ರೆಕ್ಕೆಗಳ ಪಟ ಪಟ ಸದ್ದು, ಗುಂಪು ಗುಂಪಾಗಿ ಚಿಕ್ಕ ಬಾತು ಕೋಳಿಗಳು ಮಾಡುತ್ತಿರುವ ಕ್ವಾಕ್ ಕ್ವಾಕ್ ಶಬ್ದ ಇತ್ತು. ಒಂದು ರಾತ್ರಿಯಲ್ಲಿ ನಗರದ ಅಟ್ಟಗಳು ಮೊಟ್ಟೆಯೊಡೆದು ಹೊರಬಂದ ಮರಿಗಳಿಂದ ತುಂಬಿ ಹೋದವು. ಈ ವಿಪತ್ತಿನ ಮಧ್ಯೆ ವ್ಯಂಗ್ಯವೆಂಬಂತೆ, ನಾನಾ ಗಾತ್ರದ, ನಾನಾ ಬಣ್ಣದ ಚಿಟ್ಟೆಗಳು ಹೂಗಳ ಗುಂಪುಗಳ ಮೇಲೆ ಹಾರಾಡತೊಡಗಿದವು ಮತ್ತು ಅಪಾಯರಹಿತ ಆಸರೆಗೆ ಹುಡುಕುವ ಜಾಣ ದುಂಬಿಗಳು ತಮ್ಮ ಪುರಾತನ ಅಸ್ತಿತ್ವವನ್ನು ಸಾರಲೆಂಬಂತೆ ತ್ವರಿತ ಗತಿಯಿಂದ ಮರದ ಪೊಟರೆಯಲ್ಲಿ ಜೇನುಗೂಡು ಕಟ್ಟಿದವು. ಈ ಗದ್ದಲದ ಸಸ್ಯದ ಚಲನೆಯ ಮಧ್ಯೆಯೇ ನಾವು ಕೈಗೊಡಲಿ, ಕೊಡಲಿಗಳ ಅಸ್ಪಷ್ಟ ಶಬ್ದ ಕೇಳಬಹುದಾಗಿತ್ತು. ಆದರೆ, ನಾಲ್ಕನೇಯ ದಿನಕ್ಕೆ ಯಾವ ಕೆಲಸವೂ ಅಸಾಧ್ಯವಾಯಿತು. ಹುಲ್ಲು ಎತ್ತರವಾಗಿ ಅತಿ ದಟ್ಟವಾಗಿ ಬೆಳೆಯಿತು. ಎತ್ತರಕ್ಕೇರುತ್ತಿರುವ ಬಳ್ಳಿಗಳು ಮರ ಕಡಿಯುವವರ ಕೈಗಳಿಗೆ ಸುತ್ತಿಕೊಂಡು ಅವರ ಚಲನೆ ತಡೆದವು. ಇದಲ್ಲದೆ ಮನೆಗಳು ವಾಸಿಸಲು ಅಯೋಗ್ಯವಾದವು. ಪೀಠೋಪಕರಣಗಳು ಎಲೆಗಳಿಂದ ತುಂಬಿ ಹೋಗಿ ತಮ್ಮ ಆಕಾರವನ್ನು ಕಳೆದುಕೊಂಡವು. ಮರಗಳ ಸೂಜಿಯಂತಹ ಕಾಂಡಗಳು ಚುಚ್ಚಿ ಛಾವಣಿಗಳು ಬಿದ್ದು ಹೋದವು. ಮನೆಗಳಿದ್ದ ಜಾಗದಲ್ಲಿ ಗುಂಬಜಾಕಾರದ ಮರಗಳಿದ್ದವು. ಎಲ್ಲ ಮುಗಿದುಹೋಯಿತು. ಓಡಿಹೋಗುವ ಸಮಯ ಬಂದಿತು. ಸುತ್ತುವರೆದ ಗಿಡಗಳ ಮತ್ತು ಕೊಂಬೆಗಳ ಜಾಲದ ಮೂಲಕ ಭಯಭೀತ ಅರಣ್ಯ ನಗರಿಯ ಜನರು

